ಈ) ಹಿಪ್ಪರಗಿ ಬ್ಯಾರೇಜನ್ನು 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಪೂರ್ಣಗೊಳಿಸಲಾಗುತ್ತದೆಯೇ;

ಉ) ಸದರಿ ಬ್ಯಾರೇಜನ್ನು ಪೂರ್ಣಗೊಳಿಸಲು ಬೇಕಾದ ಹಣ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) 1104 ಲಕ್ಷ ರೂ.ಗಳು

ಇ) ಈ ಯೋಜನೆಯಿಂದ 59692 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ.

ಈ) 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

ಉ) 1.4.1992ರಲ್ಲಿ ಇದ್ದಂತೆ ಬಾಕಿ ಕಾಮಗಾರಿಯನ್ನು ಮುಗಿಸಲು ಬೇಕಾದ ಅಂದಾಜು ಮೊತ್ತ ರೂ.246.74 ಕೋಟಿ ರೂ.ಗಳು (ಎಸ್ಕ್ಯಲೇಶನ್ ಸೇರಿಲ್ಲ).

ಸವಣೂರು ಹತ್ತಿರ ವರದಾ ನದಿಯ ಸೇತುವೆ ಕುರಿತು

492 (549): ಶ್ರೀ ಮಂಜುನಾಥ ಸಿ. ಕನ್ನೂರು (ಶಿಗ್ಗಾಂವ್):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ಸವಣೂರ ವರದಾನದಿಯ ಹತ್ತಿರ ವರದಾ ಸೇತುವೆ ಕಟ್ಟಿದ್ದ ಕುರಿತು ಟೋಲ್ ಕಲಕ್ಷನ್ ವಾಹನಗಳಿಗೆ ಎಷ್ಟು ವರ್ಷದಿಂದ ಎಷ್ಟು ಹಣಕ್ಕೆ ಪ್ರಾರಂಭ ಮಾಡಲಾಗಿದೆ;

ಆ) 1992ನೇ ಇಸ್ವಿಯಲ್ಲಿ ವರದಾ ಸೇತುವೆ ಟೋಲ್ ಕಲೆಕ್ಷನ್ ಟೆಂಡರಿಗೆ ಎಷ್ಟು ಅರ್ಜಿಗಳು ಬಂದಿದ್ದವು ಮತ್ತು ಅವು ಎಷ್ಟು ಹಣಕ್ಕೆ ಬಂದಿದ್ದವು ಹಾಗೂ ಅವುಗಳನ್ನು ಯಾರಿಗೆ ಕೊಡಲಾಗಿದೆ;

ಇ) ಸದರಿ ಸೇತುವೆ ಬಳಿ ಹಣ ವಸೂಲಿಯಿಂದ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿಯ ಮೇಲೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇನ್ನೂ ಎಷ್ಟು ದಿವಸ ಸದರಿ ಟೋಲ್ ಕಲೆಕ್ಷನ್ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ದಿನಾಂಕ 1.9.90ರಿಂದ ಟೋಲ್ ಕಲೆಕ್ಷನ್ (ಶುಲ್ಕ ವಸೂಲಾತಿ)ಯನ್ನು ಮಾಡಲಾಗುತ್ತಿದೆ. ಟೆಂಡರ್‌ಗೆ ನೀಡಲಾದ ಮೌಲ್ಯ 61.11 ಲಕ್ಷ ರೂ.ಗಳು.

ಆ) 1) 1.4.92 ರಿಂದ 31.3.93ರ ಅವಧಿಗೆ 11 ಟೆಂಡರುಗಳು ಬಂದಿದ್ದವು ಅವುಗಳ ವಿವರ ಪಟ್ಟಿ 'ಅ'ನಲ್ಲಿ ಲಗತ್ತಿಸಲಾಗಿದೆ.

2. ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಟೋಲ್ ದರವನ್ನು ಪರಿಷ್ಕರಿಸಿದ್ದರಿಂದ ಒಂದು ತಿಂಗಳಿಗೆ ಮಾತ್ರವೇ ಗುತ್ತಿಗೆಯು ಚಾಲ್ತಿಯಲ್ಲಿದ್ದು, ಮತ್ತೆ 1.5.92ರಿಂದ 31.3.93ರ ಅವಧಿಗೆ ಗುತ್ತಿಗೆ ಕರೆಯಲಾಯಿತು. ಅತ್ಯಧಿಕ ಮೊತ್ತವನ್ನು ಸೂಚಿಸಿದ ಗುತ್ತಿಗೆದಾರರು ಕರಾರು ಮಾಡಿಕೊಳ್ಳದಿದ್ದುದರಿಂದ, ಅದರ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಇಲಾಖಾವತಿಯಿಂದಲೇ 1.5.92 ರಿಂದ 5.7.92ರವರೆಗೆ ಟೋಲ್ ವಸೂಲಾತಿಯನ್ನು

ಮಾಡಲಾಯಿತು. 6.7.92 ರಿಂದ 31.3.93ರವರೆಗೆ ಮತ್ತೆ ಗುತ್ತಿಗೆ ಕರೆದು ಅತ್ಯಧಿಕ ಮೊತ್ತದ ಗುತ್ತಿಗೆದಾರರಿಗೆ ಗುತ್ತಿಗೆ ನೀಡಲಾಯಿತು. ಈ ಸಂಬಂಧದಲ್ಲಿ ಬಂದಿದ್ದ ಗುತ್ತಿಗೆಗಳ ವಿವರಗಳನ್ನು ಪಟ್ಟಿ 'ಇ'ನಲ್ಲಿ ಲಗತ್ತಿಸಲಾಗಿದೆ.

ಇ) ಶುಲ್ಕ ವಸೂಲಾತಿಯ ಸಮಯದಲ್ಲಿ ಸ್ವಲ್ಪ ಸಮಯ ವ್ಯಯವಾಗುವ ಸಂಭವ ಇರುತ್ತದೆ. ಇದನ್ನು ಸುಗಮಗೊಳಿಸುವ ಸಲುವಾಗಿ ಸುಮಾರು 100 ಮೀಟರ್ ಉದ್ದಕ್ಕೆ ರಸ್ತೆಯನ್ನು ಅಗಲಗೊಳಿಸಿ, 3 ಟೋಲ್ ವಸೂಲಾತಿ ಬೂತ್‌ಗಳನ್ನು ನಿರ್ಮಿಸಲಾಗಿದೆ.

ಈ) ಸುಮಾರು 1994ರ ಮಧ್ಯದವರೆಗೂ ಟೋಲ್ ವಸೂಲಾತಿ ಮುಂದುವರಿಸುವ ಸಂಭವ ಇದೆ.

ಪಟ್ಟಿ 'ಅ'

1.4.92 ರಿಂದ 31.3.1993ರ ಅವಧಿಗೆ ಬಂದಿದ್ದ ಟೆಂಡರುಗಳು:

	ಟೆಂಡರುದಾರರ ಹೆಸರು	ಸೂಚಿಸಿದ್ದ ಹಣ (ರೂ.ಗಳಲ್ಲಿ)
1.	ಡಿ.ಜಿ. ರಘುನಾಥ್	1,06,55,555–00
2.	ಬಿ.ಎಂ. ರವೀಂದ್ರ	1,05,70,000–00
3.	ಎ. ಜಾರ್ಜ್	1.03,79,895–00
4,	ಎಂ.ಜಿ. ಮೆಲಂಟಾ	1,03,10,000–00
5.	ಸತ್ಯೇಂದ್ರಪ್ಪ	1.02,24,048-00
6.	ಎಸ್. ವೆಂಕಟರಮಣ	97,00,000-00
7.	ಬಿ.ಬಿ. ಬನವಲ್ಲಿ	95,00,000-00
8.	ಬಿ. ರಾಮದಾಸ	93,93,939-00
9.	ಎನ್.ಹೆಚ್. ಕೋನರೆಡ್ಡಿ	85,00,000-00
10.	ದುರ್ಗಾಂಬಿಕಾ	77,77,777-00
11.	ಸಿ. ಕೃಷ್ಣಾ	73,00,365-00

ಪಟ್ಟಿ 'ಇ'

1-7-1992ರಿಂದ 31-3-1993ರ ಅವಧಿಗೆ ಬಂದಿದ್ದ ಟೆಂಡರುಗಳು

1.	ಎನ್.ಹೆಚ್. ಕೋನರೆಡ್ಡಿ	1,19,00,000-00
2.	ಎಂ.ಜಿ. ಮೆಲಂಟಾ	1,06,60,000-00
3.	.....	1,00,00,000-00
4.	ಬಿ.ಆರ್. ಚೆನ್ನಾರೆಡ್ಡಿ	95,51,000-00

ದೇವರ ಹೊನ್ನಾಳಿಯ ಏತ ನೀರಾವರಿ

493 (454): ಡಾ।। ಡಿ.ಬಿ. ಗಂಗಪ್ಪ (ಹೊನ್ನಾಳಿ):--

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿಯ ಹತ್ತಿರ ಏತ ನೀರಾವರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೇ;